

ಮುಂಜಾನೆ ಮಂಜಿನ ಆವರಣದಲ್ಲಿ ಕಂಡ ಸಾಲು ಸಾಲು ಬಂಡಿಗಳ ಸಾಲು



ತಳ್ಳು ತಳ್ಳು ಐಸಾ... ಏರು ದಾರಿಯಲ್ಲಿ ಬಂಡಿ ತಳ್ಳುತ್ತಿರುವ ಪ್ರಯಾಣಿಕರು

ಹುಣ್ಣಿಮೆ'ವರೆಗೂ ಈ ಜಾತ್ರೆ ನಡೆಯುತ್ತದೆ. ಸುಮಾರು 30 ದಿನಗಳ ಕಾಲ ನಡೆಯುವ ಈ ಜಾತ್ರಾ ಅವಧಿಯಲ್ಲಿ ಭಾಗವಹಿಸುವ ಲಕ್ಷಾಂತರ ಭಕ್ತರ ಸಂಭ್ರಮ, ಭಕ್ತಿಯ ಭಾವಾವೇಶ ನೋಡಲು ಎರಡು ಕಣ್ಣು ಸಾಲದು.

ಏಳುಕೊಳ್ಳದ ಸವದತ್ತಿ ಯಲ್ಲಮ್ಮನ ಜಾತ್ರೆಗೆ ಮೆರುಗು ತುಂಬುವುದು ಭಂಡಾರ ಮತ್ತು ಬಂಡಿಗಳು. ಹಳದಿ ಬಣ್ಣದ ಭಂಡಾರ ಭಕ್ತರ ದೇಹವನ್ನು ಅಲಂಕರಿಸಿದರೆ, ದೂರದ ಮಹಾರಾಷ್ಟ್ರ, ಆಂಧ್ರ, ತೆಲಂಗಾಣ, ಗೋವಾ ರಾಜ್ಯಗಳಿಂದ ಆಗಮಿಸುವ ಭಕ್ತರ ಬಂಡಿಗಳು ಇಲ್ಲಿನ ಪ್ರಕೃತಿಯನ್ನು ಸಿಂಗರಿಸಿರುತ್ತವೆ ಮತ್ತು ಜಾತ್ರಾ ವಾತಾವರಣವನ್ನು ಸೃಷ್ಟಿಸುತ್ತವೆ. ಬೆಳ್ಳಂಬೆಳಿಗ್ಗೆ ಚುಮುಚುಮು ಮಂಜು ಹೊದ್ದ ರಸ್ತೆಗಳಲ್ಲಿ ಆಗಮಿಸುವ ಕೊಲ್ಹಾರಿ ಬಂಡಿಗಳ ಸಾಲು ನೋಡುಗರನ್ನು ಬೇರೆಯ ಲೋಕಕ್ಕೆ ಕೊಂಡೊಯ್ಯುವುದರಲ್ಲಿ ಯಾವುದೇ ಸಂಶಯವಿಲ್ಲ. ರೈಲಿನ ಬೋಗಿಗಳ ಹಾಗೆ ಒಂದರ ಹಿಂದೆ ಇನ್ನೊಂದರಂತೆ ಸಾಲು ಸಾಲಾಗಿ ಆಗಮಿಸುವ ಬಂಡಿಗಳನ್ನು ನೋಡುವುದೇ ಚೆಂದ. ಬೆಟ್ಟ ಕೊರೆದು ನಿರ್ಮಿಸಿರುವ ರಸ್ತೆಗಳ